## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ. ರವರ ನ್ಯಾಯಾಲಯ, ಕೊಪ್ಪ.

**ಸಿ.ಸಿ.ನಂ. 769/2021**

ಪಿರ್ಯಾಧಿದಾರರು: ರಾಜ್ಯದ ಪರವಾಗಿ ಕೊಪ್ಪ ಪೊಲೀಸ್ ಠಾಣೆ,

ವಿರುದ್ಧ

ಆರೋಪಿ: 1 ಎಸ್.ಹೆಚ್ ಮೈಯದ್ದೀನ್ ಬಿನ್ ಎಸ್.ಎ. ಹಾಜಬ್ಬ, 51 ವರ್ಷ, ಚಾಲಕ ವೃತ್ತಿ, ಕ್ರಂಟ್ರಾಕ್ಟರ್ ಕೆಲಸ, ವಾಸ ಸುಭಾಷ್ ರಸ್ತೆ, ಕೊಪ್ಪ ತಾಲ್ಲೂಕು.

2. ಮಹಮ್ಮದ್ ಅಬ್ಬು ಬಿನ್ ಎಸ್.ಎ. ಹಾಜಬ್ಬ, 50 ವರ್ಷ, ಕ್ರಂಟ್ರಾಕ್ಟರ್ ಕೆಲಸ, ವಾಸ ಕೆಸವೆ ರಸ್ತೆ, ಹರಂದೂರು ಗ್ರಾಮ, ಕೊಪ್ಪ ತಾಲ್ಲೂಕು.

3. ಸುಹೇಲ್ ಬಿನ್ ಇಸ್ಮಾಯಿಲ್ **(ಸಿ.ಸಿ.ನಂ.33/2025 ರಲ್ಲಿ ಪ್ರತ್ಯೇಕಿಸಲಾಗಿದೆ.)**

4. ಹರೀಶ ಪೂಜಾರಿ ಬಿನ್ ಲಕ್ಷ್ಮಣ ಪೂಜಾರಿ, 39 ವರ್ಷ, ವ್ಯಾಪಾರ ವೃತ್ತಿ, ವಾಸ ಬಿ.ಸಿ. ರಸ್ತೆ, ಮಂಗಳೂರು.

5. ಅಬ್ದುಲ್ ಬಿನ್ ಅಬ್ದುಲ್ ರೆಹಮಾನ್, 32 ವರ್ಷ, ವಾಸ ದೇರಲಕಟ್ಟೆ, ಮಂಗಳೂರು.

### ದೋಷಾರೋಪಣೆ

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ಶ್ರೀಮತಿ ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ, ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿತರಾದ ನಿಮ್ಮ ವಿರುದ್ಧ ಕೆಳಕಂಡ ದೋಷಾರೋಪಣೆಯನ್ನು ಹೊರಿಸುತ್ತೇನೆ.

ದಿನಾಂಕ 26.02.2021 ರಂದು ಬೆಳಿಗ್ಗೆ 09.00 ಗಂಟೆ ಸಮಯದಲ್ಲಿ ಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ಹರಂದೂರು ಗ್ರಾಮ, ಕೆಸವೆ ರಸ್ತೆ ಸಮೀಪದ ಸರ್ವೆ ನಂ. 41 ಪಿ ರಲ್ಲಿನ ಚಾಸಾ.1 ಅಬ್ದುಲ್ ಖಾದರ್ ರವರು ತಮ್ಮ ಬಾಬ್ತು ಜಾಗಕ್ಕೆ ಕೆಎ-19/ಪಿ-0527 ನಂಬರಿನ ಕಾರನ್ನು ಚಾಲನೆ ಮಾಡಿಕೊಂಡು ಹೋದಾಗ 1, 2, 4 ಮತ್ತು 5 ನೇ ಆರೋಪಿಗಳಾದ 3 ನೇ ಆರೋಪಿತನೊಂದಿಗೆ ಸೇರಿಕೊಂಡು ಏಕೋದ್ದೇಶದಿಂದ ಅಪರಾಧ ಮಾಡುವ ಉದ್ದೇಶವನ್ನು ಹೊಂದಿ, ಅಕ್ರಮ ಗುಂಪು ಕಟ್ಟಿಕೊಂಡಿದ್ದೀರಿ. ಈ ರೀತ್ಯಾ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **143** ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು 1, 2, 4 ಮತ್ತು 5 ನೇ ಆರೋಪಿಗಳಾದ ನೀವು 3 ನೇ ಆರೋಪಿತನೊಂದಿಗೆ ಸೇರಿಕೊಂಡು ಏಕೋದ್ದೇಶದಿಂದ ಮುಂದುವರೆದು ಅಪರಾಧ ಮಾಡುವ ಉದ್ದೇಶವನ್ನು ಹೊಂದಿ, ಕೈಯಲ್ಲಿ ಮಾರಕಾಸ್ತ್ರಗಳಾದ ಕಲ್ಲು ಮತ್ತು ದೊಣ್ಣೆಯನ್ನು ಹೊಂದಿ, ಅಕ್ರಮ ಗುಂಪು ಕಟ್ಟಿಕೊಂಡಿದ್ದೀರಿ. ಈ ರೀತ್ಯಾ ಆರೋಪಿತರಾದ ನೀವು ಭಾ.ದಂ.ಸಂ.ಕಲಂ

22/2

**144** ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ
ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು 1, 2, 4 ಮತ್ತು 5ನೇ ಆರೋಪಿಗಳಾದ ನೀವು 3ನೇ ಆರೋಪಿತನೊಂದಿಗೆ ಸೇರಿಕೊಂಡು ಏಕೋದ್ದೇಶದಿಂದ ಮುಂದುವರೆದು ಅಪರಾಧ ಮಾಡುವ ಉದ್ದೇಶವನ್ನು ಹೊಂದಿ, ಅಕ್ರಮ ಗುಂಪು ಕಟ್ಟಿಕೊಂಡು, ದೊಂಬಿ ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **147** ಸಹವಾಚಕ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು 1, 2, 4 ಮತ್ತು 5ನೇ ಆರೋಪಿಗಳಾದ ನೀವು 3ನೇ ಆರೋಪಿತನೊಂದಿಗೆ ಸೇರಿಕೊಂಡು ಏಕೋದ್ದೇಶದಿಂದ ಮುಂದುವರೆದು ಅಪರಾಧ ಮಾಡುವ ಉದ್ದೇಶವನ್ನು ಹೊಂದಿ, ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು, ಅಕ್ರಮ ಗುಂಪು ಕಟ್ಟಿಕೊಂಡು, ದೊಂಬಿ ಮಾಡಿರುತ್ತೀರಿ. ಈ ರೀತ್ಯಾ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **148** ಸಹವಾಚಕ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು 1, 2, 4 ಮತ್ತು 5ನೇ ಆರೋಪಿಗಳಾದ ನೀವು 3ನೇ ಆರೋಪಿತನೊಂದಿಗೆ ಸೇರಿಕೊಂಡು ಏಕೋದ್ದೇಶದಿಂದ ಮುಂದುವರೆದು ಅಪರಾಧ ಮಾಡುವ ಉದ್ದೇಶವನ್ನು ಹೊಂದಿ, ಚಾಸಾ.1 ರವರು ಸರ್ವೆ ನಂ. 41 ಪಿ ರಲ್ಲಿನ ತಮ್ಮ ಬಾಬ್ತು ಜಾಗಕ್ಕೆ ಕೆಎ-19/ಪಿ-0527 ನಂಬರಿನ ಕಾರನ್ನು ಚಾಲನೆ ಮಾಡಿಕೊಂಡು ಹೋದಾಗ, ಅವರು ಮುಂದೆ ಹೋಗದಂತೆ ಅವರ ಕಾರನ್ನು ಅಡ್ಡಗಟ್ಟಿ ತಡೆದಿದ್ದೀರಿ. ಈ ರೀತ್ಯಾ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **341** ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು 1, 2, 4 ಮತ್ತು 5ನೇ ಆರೋಪಿಗಳಾದ ನೀವು 3ನೇ ಆರೋಪಿತನೊಂದಿಗೆ ಸೇರಿಕೊಂಡು ಏಕೋದ್ದೇಶದಿಂದ ಮುಂದುವರೆದು ಅಪರಾಧ ಮಾಡುವ ಉದ್ದೇಶವನ್ನು ಹೊಂದಿ, ನಿಮ್ಮ ಪೈಕಿ 1 ಮತ್ತು 2ನೇ ಆರೋಪಿಗಳಾದ ನೀವು ಚಾಸಾ.1 ರವರ 19/ಪಿ-0527 ನಂಬರಿನ ಕಾರಿಗೆ ಕಲ್ಲು ಮತ್ತು ದೊಣ್ಣೆಗಳಿಂದ ಹೊಡೆದು ಕಾರಿನ ಗಾಜುಗಳನ್ನು ಪುಡಿ ಮಾಡಿ, ಚಾಸಾ.1 ರವರು ಕೈಗೆ ಕಟ್ಟಿದ್ದ ವಾಚನ್ನು ಜಖಂ ಗೊಳಿಸಿ, ಚಾಸಾ.1 ರವರಿಗೆ ನಷ್ಟವನ್ನುಂಟು ಮಾಡಿದ್ದೀರಿ. ಈ ರೀತ್ಯಾ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **427** ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

22/2

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು 1, 2, 4 ಮತ್ತು 5 ನೇ ಆರೋಪಿಗಳಾದ ನೀವು 3 ನೇ ಆರೋಪಿತನೊಂದಿಗೆ ಸೇರಿಕೊಂಡು ಏಕೋದ್ದೇಶದಿಂದ ಮುಂದುವರೆದು ಅಪರಾಧ ಮಾಡುವ ಉದ್ದೇಶವನ್ನು ಹೊಂದಿ, ನಿಮ್ಮ ಪೈಕಿ 4 ನೇ ಆರೋಪಿಯಾದ ನೀವು ನಿಮ್ಮ ಕೈಯಿಂದ ಚಾಸಾ.1 ರವರ ಮೈಕೈಗೆ ಗುದ್ದಿದ್ದು ಹಾಗೂ 1 ಮತ್ತು 2 ನೇ ಆರೋಪಿಗಳಾದ ನೀವು ನಿಮ್ಮ ಕೈಗಳಿಂದ ಚಾಸಾ.1 ಮತ್ತು 2 ರವರ ಮೈಕೈಗಳಿಗೆ ಹೊಡೆದು ಸಾಮಾನ್ಯ ಸ್ವರೂಪದ ರಕ್ತಯವನ್ನುಂಟು ಮಾಡಿದ್ದೀರಿ. ಈ ರೀತ್ಯಾ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **324** ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು 1, 2, 4 ಮತ್ತು 5 ನೇ ಆರೋಪಿಗಳಾದ ನೀವು 3 ನೇ ಆರೋಪಿತನೊಂದಿಗೆ ಸೇರಿಕೊಂಡು ಏಕೋದ್ದೇಶದಿಂದ ಮುಂದುವರೆದು, ಅಪರಾಧ ಮಾಡುವ ಉದ್ದೇಶವನ್ನು ಹೊಂದಿ, ನಿಮ್ಮ ಪೈಕಿ 1 ಮತ್ತು 2 ನೇ ಆರೋಪಿಗಳಾದ ನೀವು ಚಾಸಾ.2 ಮತ್ತು 3 ರವರಿಗೆ ಸೂಳೆಮಗ, ಬೋಳಿಮಗ ಎಂದು ಅವಾಚ್ಯ ಶಬ್ದಗಳಿಂದ ಬೈದ್ದೀರಿ. ಈ ರೀತ್ಯಾ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **504** ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ವೇಳೆ, ಸ್ಥಳ ಮತ್ತು ದಿನಾಂಕದಂದು 1, 2, 4 ಮತ್ತು 5 ನೇ ಆರೋಪಿಗಳಾದ ನೀವು 3 ನೇ ಆರೋಪಿತನೊಂದಿಗೆ ಸೇರಿಕೊಂಡು ಏಕೋದ್ದೇಶದಿಂದ ಮುಂದುವರೆದು, ಅಪರಾಧ ಮಾಡುವ ಉದ್ದೇಶವನ್ನು ಹೊಂದಿ, ಚಾಸಾ.1 ಮತ್ತು 2 ರವರಿಗೆ ನಿಮ್ಮನ್ನು ಇಷ್ಟಕ್ಕೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದೀರಿ. ಈ ರೀತ್ಯಾ ಆರೋಪಿತರಾದ ನೀವು ಭಾ.ದಂ.ಸಂ.ಕಲಂ **506** ಸಹ ಕಲಂ 149 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ.

ಮೇಲೆ ಹೇಳಿದ ಎಲ್ಲಾ ಅಪರಾಧಗಳಿಗೆ ಆರೋಪಿಗಳಾದ ನೀವು ಈ ನ್ಯಾಯಾಲಯದಲ್ಲಿ ನನ್ನ ಮುಂದೆ ವಿಚಾರಣೆಗೊಳಗಾಗಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.

ಪ್ರಶ್ನೆ-1: ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ ?

ಉತ್ತರ: ಆ-1 ಅರ್ಥವಾಯಿತು ಆ-4 ಅರ್ಥವಾಯಿತು

ಆ-2 " ಆ-5 "

ಪ್ರಶ್ನೆ-2ಃ ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ ಆ-1 ಒಪ್ಪಿಕೊಳ್ಳುವುದಿಲ್ಲ & ವಿಚಾರಣೆಯಾಗ ಆ-4 ಒಪ್ಪಿಕೊಳ್ಳುವುದಿಲ್ಲ ವಿಚಾರಣೆಯಾಗಬೇಕು

ಆ-2 ″ ″ ಆ-5 ″ ″ ″

(ಆರೋಪಿತರಿಗೆ ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ.)

ದಿನಾಂಕಃ 22/2/202…

ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ., 22/2/202…
ಕೊಪ್ಪ.

ಆರೋಪಿತರ ಸಹಿಃ

Harish

ALATHIF